ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣಸೇವೆಗಳ ನಿರ್ದೇಶನಾಲಯ, ಬೆಂಗಳೂರು.

ಸಂಖ್ಯೆ: ಆಡಳಿತ/74/2017-18 ದಿನಾಂಕ: 28.10.2017

ಸುತ್ತೋಲೆ.

ವಿಷಯ: "ಜಾಗೃತಿ ಅರಿವು ಸಪ್ತಾಹ 2017 " ಆಚರಿಸುವ ಬಗ್ಗೆ.

ಉಲ್ಲೇಖ: ಆಕುಕ 862 ಅಮುಕಾ 2017 ದಿನಾಂಕ:27.10.2017ರ ಟಿಪ್ಪಣಿಯನ್ವಯ

********

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂದಿಸಿದಂತೆ, ಶ್ರೀ. ಅಜಯ್ ಸೇಠ್ ಭಾ.ಆ.ಸೇ.,ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು. ಇವರ ಪತ್ರದ ಸಂಖ್ಯೆ: ಆಕುಕ 862 ಅಮುಕಾ 2017 ದಿನಾಂಕ:27.10.2017ರ ಟಿಪ್ಪಣಿಯನ್ವಯ ಸಾರ್ವಜನಿಕ ಆರೋಗ್ಯ ಸಂಸ್ಥೆಗಳ ಮತ್ತು ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ, ಎಲ್ಲಾ ಕಾರ್ಯಕರ್ತರುಗಳು ಭ್ರಷ್ಟಾಚಾರದ ವಿರುದ್ಧ ಜಾಗೃತಿ ಮೂಡಿಸಲು ದಿನಾಂಕ 30.10.2017 ರಿಂದ ದಿನಾಂಕ.04.11.2017 (1 ವಾರದ ಕಾಲ) ರವರೆಗೂ "ಜಾಗೃತಿ ಅರಿವು ಸಪ್ತಾಹ " My Vision – Corruption Free India" ಕುರಿತು ವಿಜಿಲೆನ್ಸ ಅವೇರನೆಸ್ ಕಾರ್ಯಕ್ರಮವನ್ನು ಪ್ರತಿಜ್ಞೆಯ ಮೂಲಕ ಆಚರಿಸುವಂತೆ ಆದೇಶಿಸಿರುತ್ತಾರೆ.

ಈ ಪ್ರತಿಜ್ಞೆ ವಿಧಿಯನ್ನು ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ/ಸಂಸ್ಥೆಗಳಲ್ಲಿ ಆಚರಣೆ ಮಾಡಲು ಕ್ರಮ ವಹಿಸಲು ಸೂಚಿಸಿದೆ.

ನಿರ್ದೇಶಕರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಬೆಂಗಳೂರು

ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ.

1. ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ, ಬೆಂಗಳೂರು.
2. ಮಾನ್ಯ ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ.

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:

3. ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ, ಬೆಂಗಳೂರು, ರವರ ಆಪ್ತಶಾಖೆ.
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಬೆಂಗಳೂರು.
5. ಅಪರ ನಿರ್ದೇಶಕರು, ಕರ್ನಾಟಕ ಡ್ರಗ್ಸ್ ಮತ್ತು ವೇರ್ ಹೌಸ್ ಸೊಸೈಟಿ, ಬೆಂಗಳೂರು.
6. ಎಲ್ಲಾ ಅಪರ ನಿರ್ದೇಶಕರು / ಸಹ ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ವೈದ್ಯಕೀಯ ಅಧೀಕ್ಷಕರು . . . . . . . . . . ಆಸ್ಪತ್ರೆ.
8. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು.
9. ಎಲ್ಲಾ ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ.
10. ಕಛೇರಿ ಪ್ರತಿ.

The Integrity Pledge translated in Kannada may also be displayed at prominent places in all Government Hospitals, Primary Health Centers, Children's Hospital, where the Doctors and the nursing staffs have the occasion to read the pledge and appreciates their role and commitment towards provides value based and ethical services to the Patients

ಅಜಯ್ ಸೇಠ್, ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ದೂರವಾಣಿ: 080-22255324
080-2203 4234
ಫ್ಯಾಕ್ಸ್: 080-22353916
ಇ-ಮೇಲ್: prs-hfw@karnataka.gov.in.
ಕೊಠಡಿ ಸಂಖ್ಯೆ: 105, ಮೊದಲನೇ ಮಹಡಿ
ವಿಕಾಸಸೌಧ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು-560 001

ಸಂಖ್ಯೆ: ಆಕುಕ 862 ಅಮುಕಾ 2017

ದಿನಾಂಕ:27.10.2017

**ಟಿಪ್ಪಣಿ**

ಸಾರ್ವಜನಿಕ ಆರೋಗ್ಯ ಸಂಸ್ಥೆಗಳ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎಲ್ಲಾ ಕಾರ್ಯಕರ್ತರುಗಳು ದಿನಾಂಕ:30.10.2017 ರಿಂದ 04.11.2017 ರವರೆಗೆ ಒಂದು ವಾರದ ಕಾಲ "My Vision - Corruption Free India" ಕುರಿತು ವಿಜಿಲೆನ್ಸ್ ಅವೇರ್‌ನೆಸ್ ಕಾರ್ಯಕ್ರಮವನ್ನು ಆಚರಿಸುವ ಸಂಬಂಧ ಹಾಗೂ ಸಮಗ್ರತೆ ಪ್ರತಿಜ್ಞೆಯನ್ನು ಸ್ವೀಕರಿಸುವಂತೆ ಕೋರಿ ಮುಖ್ಯ ಜಾಗೃತಿ ಅಧಿಕಾರಿ, ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಬೆಂಗಳೂರು ಇವರಿಂದ ಸ್ವೀಕರಿಸಲಾಗಿರುವ ದಿನಾಂಕ:17.10.2017ರ ಪತ್ರವನ್ನು ಇದರೊಂದಿಗೆ ಲಗತ್ತಿಸಿದೆ.

ಸದರಿ ಪತ್ರದಲ್ಲಿ ತಿಳಿಸಿರುವಂತೆ ದಿನಾಂಕ:30.10.2017 ರಿಂದ 04.11.2017 ರವರೆಗೆ 'ವಿಜಿಲೆನ್ಸ್ ಅವೇರ್‌ನೆಸ್ ವೀಕ್' ಆಚರಿಸುವ ಕುರಿತು ಹಾಗೂ ಸಮಗ್ರತೆ ಪ್ರತಿಜ್ಞೆಯನ್ನು ಸ್ವೀಕರಿಸುವ ಸಂಬಂಧ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

(ಅಜಯ್ ಸೇಠ್)
ಅಪರ ಮುಖ್ಯ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಶ್ರೀ ಮನೋಜ್ ಕುಮಾರ್ ಮೀನಾ, ಭಾಆಸೇ,
ಆಯುಕ್ತರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
ಆನಂದರಾವ್ ವೃತ್ತ,
ಬೆಂಗಳೂರು.

P.S.
1. Ask the concern to upload the Integrity pledge on Dept. website / Kannada Translation also

# ಪ್ರತಿಜ್ಞೆ

ಕರ್ನಾಟಕದ ಸಾರ್ವಜನಿಕ ನೌಕರರಾದ ನಾವು ನಮ್ಮ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕತೆ ಮತ್ತು ಪಾರದರ್ಶಕತೆಯನ್ನು ತರಲು ನಿರಂತರವಾಗಿ ಶ್ರಮಿಸುತ್ತೇವೆಂದು ಪ್ರತಿಜ್ಞೆ ಮಾಡುತ್ತೇವೆ. ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ಕಾರ್ಯಶೀಲರಾಗುತ್ತೇವೆಂದು ನಾವು ಪ್ರಮಾಣ ಮಾಡುತ್ತೇವೆ. ನಾವು ಯಾವಾಗಲೂ ಜಾಗೃತರಾಗಿರುತ್ತೇವೆ ಮತ್ತು ನಮ್ಮ ಸಂಸ್ಥೆಯ ಅಭಿವೃದ್ಧಿ ಮತ್ತು ಘನತೆಗಾಗಿ ಕಾರ್ಯನಿರ್ವಹಿಸುತ್ತೇವೆ. ನಮ್ಮ ಸಾಂಘಿಕ ಪ್ರಯತ್ನಗಳ ಮುಖೇನ ನಮ್ಮ ಸಂಸ್ಥೆಗೆ ಹೆಮ್ಮೆಯನ್ನು ತರುತ್ತೇವೆ ಮತ್ತು ನಮ್ಮ ನಾಡ ಜನತೆಗೆ ಮೌಲ್ಯಾಧಾರಿತ ಸೇವೆಯನ್ನು ಒದಗಿಸುತ್ತೇವೆ. ನಾವು ನಮ್ಮ ಕರ್ತವ್ಯಗಳನ್ನು ಶುದ್ಧ ಅಂತಃಕರಣದಿಂದ ನಿರ್ವಹಿಸುತ್ತೇವೆ ಮತ್ತು ಯಾವುದೇ ಭಯ ಅಥವಾ ಪಕ್ಷಪಾತವಿಲ್ಲದೆ ಕಾರ್ಯ ನಿರ್ವಹಿಸುತ್ತೇವೆ.

*****